

ಒಂದು ಐಡಿಯಾ ಇದು. ಈ ಮನೆಯಲ್ಲಿ ಇನ್ನೊಂದು ಸದಸ್ಯರ ಅಗತ್ಯವಿದೆ, ಅವರು ಬಂದು ಮಾತಾಡುತ್ತಾ ಕಾಲ ಕಳೆಯುತ್ತಲೇ ಖಂಡಿತ ತಮ್ಮ ಮನೆಯ ಸಂತೋಷ ವೃದ್ಧಿಯಾಗುತ್ತದೆ ಅಂತ ಅವನು ಒಂದು ದಿನ ಹೇಳಿದ. ಅಷ್ಟಕ್ಕೂ ಅವನ ಮನೆಯನ್ನು ವಿನ್ಯಾಸಗೊಳಿಸುವಾಗಲೇ ಅಂಥ ಇನ್ನೊಬ್ಬರ ಸ್ಪೇಸ್ ಸಿದ್ಧ ಮಾಡಿ ಇಟ್ಟಾಗಿತ್ತು. ಅವತ್ತು ಹಾಲ ಹುಣ್ಣಿಮೆಯ ಇರುಳು. ಟೆರೇಸ್ ಮೇಲೆ ಹೋಗಿ ಇಬ್ಬರೂ ಕುಳಿತುಕೊಳ್ಳೋಣ ಅಂತ ನಿರ್ಧರಿಸಿದ್ದರು. ಬೆಳಕಿನ ಬೆಂಕಿಯನ್ನು ಮೈಗೆ ತಗುಲಿಸಿಕೊಂಡ ಲಂಕೆಯಂತೆ ಬೆಂಗಳೂರು ಟೆರೇಸಿನಿಂದ ಕಾಣುತ್ತಿತ್ತು, ಚಂದಿರನೊಬ್ಬನೇ ಬೇಯದೇ ಬೆಳಗುತ್ತಿದ್ದ.

ಅವನು ಕೇಳಿದನಮ್ಮಿಬ್ಬರಿಗೂ ಹೆಚ್ಚು ಮಾತಾಡೋದಕ್ಕೆ ಬರೋದೇ ಇಲ್ಲ ಅಲ್ವಾ?

ಅವಳೆಂದಳು ಹೂಂ, ನನ್ನ ಕೇಳಿದ್ರೆ ಹಣ್ಣು ಹಣ್ಣು ಮುದುಕಿಯ ಬೆಡ್‌ಪ್ಯಾನ್ ಕತೆ ಹೇಳ್ತೀನಿ, ನಿನ್ನ ಕೇಳಿದ್ರೆ ವಯಸ್ಸಾಗದೇ ಇರೋ ರಾಕ್ಷಸಿಯ ಕೋರೆ ಹಲ್ಲಿನ ಒಳಗೆ ಸಿಕ್ಕು ಹಾಕ್ಕೊಂಡಿರೋ ಮಾಂಸದ ಚೂರಿನ ವಿನ್ಯಾಸದ ಬಗ್ಗೆ ಮಾತಾಡ್ತೀಯಾ. ಅಲ್ವಾ?

ಇಬ್ಬರೂ ನಕ್ಕರು, ತುಂಬ ದಿನ ಆಗಿತ್ತು ಹಾಗೆ ಅವರು ನಕ್ಕು.

ಅವನೆಂದ ಈಗ ಇವೆರಡೂ ಬೇಡ, ಏನಂತಿ? ನಮ್ಮನೆಗೆ ಒಬ್ಬರನ್ನು ಕರೆದುಕೊಂಡು ಬರೋಣ.

ಅವಳೆಂದಳು ಯಾರನ್ನ?

ಅವನೆಂದ ಯಾರಂತ ಹೇಳ್ತೀನಿ, ಸರ್ಪ್ರೈಸ್. ಆದ್ರೆ ಅವ್ರು ಈ ಮನೇಲಿ ಮನೆ ತುಂಬ ಓಡಾಡ್ಕೊಂಡ್ ಇರ್ತಾರೆ, ನಿನ್ನ ಮಾತೆಲ್ಲಾ ಕೇಳಿಸ್ಕೊಳ್ಳೋಕೆ ಅವರಿಗೆ ಅಗಲ ಕಿವಿ ಇದೆ. ನಿನ್ನ ಅವ್ರು ಮಾತಿನ ಸೊಂಡಿಲಲ್ಲೇ ತಿರುಗಿಸಿ ತಗೊಂಡ್ ಹೋಗ್ಬಿಡ್ತಾರೆ.

ಅವಳು ನಕ್ಕಳು ಏನು ಆನೆ ಕೊಂಡ್ಕೊಂಡ್ ಬರ್ತಿದ್ದೀರಾ? ಅವನು ನಗಲಿಲ್ಲ ಹಾಗಂತಲ್ಲ. ಈ ಮನೆಗೆ ನಂಗೂ ನಿಂಗೂ ಮಧ್ಯೆ ಇನ್ನೂ ಯಾರೋ ಬೇಕು. ನಮ್ಮಿಬ್ಬರ ಮಧ್ಯೆ ಮಗು ಬರಬೇಕು ಅಂತ ಅಂದ್ಕೊಂಡೆ. ಆದ್ರೆ ಏನ್ ಮಾಡೋದು ಮಕ್ಕಳು ದೊಡ್ಡೋರಾಗ್ಬಿಡ್ತಾರೆ, ದೊಡ್ಡೋರಾಗೋ ಹೊತ್ಗೆ ಅಲ್ಲಿದ್ದಾನಲ್ಲಾ ಆ ಚಂದ್ರ, ಅವ್ನ ಲೋಕದಲ್ಲಿ ಬಹುಶಃ ಮನುಷ್ಯ ಬದುಕೋದಕ್ಕೆ ಓಪನಿಂಗ್ಸ್ ಶುರುವಾಗಿರತ್ತೆ, ಅಲ್ಲಿ ಅವ್ರು ತನ್ನ ಮಗನಿಗೆ ಸೈಟ್ ಕೊಂಡ್ಕೊಳ್ಳೋದಕ್ಕೆ ಪ್ಲಾನ್ ಶುರು ಮಾಡಿರ್ತಾನೆ.

ಅವಳಿಗೆ ನಗು ಬಂತು ನಿಮ್ಮ ಮನೆ ವಿನ್ಯಾಸ ಮಾತ್ರ ವಿಚಿತ್ರ ಅಂದ್ಕೊಂಡಿದ್ದೆ, ನೀವು ಮಾತಾಡೋದಕ್ಕೆ ಕೂತ್ಕೊಂಡ್ರೆ ಇನ್ನೂ ವಿಚಿತ್ರ ಮಾತಾಡ್ತೀರಿ.

ಅವನು ಮಾತಾಡಲಿಲ್ಲ.

ಅವಳು ಮತ್ತೆ ಹೇಳಿದಳು ಅಲ್ಲ, ನೀವು ಇಷ್ಟೆಲ್ಲಾ ಮಾತಾಡ್ತೀರಿ ಅಂತ ಗೊತ್ತಾಗಿದ್ರೆ ನಿಮ್ಮ ರಾಕ್ಷಸ ಗಣಗಳ ಜೊತೆ ನಾನು ಈ ಮನೇಲಿ ಡೇಟಿಂಗ್ ಮಾಡೋದಾದ್ರೂ ತಪ್ಪಿತ್ತು.

ಅವನಿಗೆ ವೇದನೆಯಾಯಿತು ನೋಡು, ಅದಕ್ಕೇ ನಿಂಗೆ ಅಂತ ಈ ಪ್ಲಾನ್ ಫಿಕ್ಸ್ ಮಾಡಿರೋದು, ಏನೀಗ ನಮ್ಮನೆಗೆ ಅವ್ರನ್ನ ಕರ್ಕೊಂಡ್ ಬರೋದಾ ಬೇಡ್ವಾ?

ಅವಳೆಂದಳು ಖಂಡಿತ ಕರ್ಕೊಂಡ್ ಬನ್ನಿ, ನಂಗೂ ಸಾಕಾಗಿದೆ ಈ ಮನೆ, ಆ ಕೆಲಸ, ಈ ಮೌನ, ಈ ಬಾಲ್ಕನಿ. ಆದ್ರೆ ಆಮೇಲೆ ಅದ್ಯಾವ್ದೋ ಹುಡ್ಗನ್ನ ನೀವು ಕರ್ಕೊಂಡ್ ಬಂದು, ಅವ್ನ ಮೇಲೆ ನಂಗೆ ಪ್ರೀತಿ ಆಗಿ ನೀವು ನನ್ನ ಕೊಲೆ ಮಾಡಿ, ಈ ಹೊಗೆ ನಳಿಕೇಲಿ ಹಾಕಿಟ್ಟು, ಅದು ಊರೆಲ್ಲಾ ವಾಸ್ನೆ ಬಂದು.. ಅನಾಹುತ ಆಗ್ಬಾರ್ದು.

ಅವನು ಈ ಸಲ ಮನಸಾರೆ ನಕ್ಕ ಇಲ್ಲ ಬಿಡು ಅಂಥವ್ರನ್ನ ಹುಡ್ಕೊಂಡ್ ಬರೋದಿಲ್ಲ, ನಿಂಗೆ ಎಂಥ ಒಳ್ಳೆ ಸ್ನೇಹಿತರನ್ನ ಕರ್ಕೊಂಡ್ ಬರ್ತಿದ್ದೀನಿ ಅಂದ್ರೆ ನೀನು ನಿಜವಾಗ್ಲೂ ಖುಷಿ ಆಗ್ತೀಯಾ..

ಅಲ್ಲಿಗೆ ಅವರ ಮಾತು ಸಮಾಪ್ತಗೊಂಡಿತು. ಇಬ್ಬರೂ ಬಹಳ ಹೊತ್ತು ಚಂದ್ರನನ್ನು ಮಾತಾಡಿಸಿದರು. ಬೆಳಿಗ್ಗೆ ಎದ್ದು, ಬರುವ ಅತಿಥಿಗೋಸ್ಕರ ಮನೆಯನ್ನು ಮುಂದಿನೊಂದು ವಾರದ ಕಾಲ ಹೇಗೆ ಸಜ್ಜುಗೊಳಿಸಬೇಕೆಂದು ಯೋಜನೆ ರೂಪಿಸಿಕೊಂಡರು.

ಲಿವಿಂಗ್ ಏರಿಯಾದಲ್ಲೇ ಮಹತ್ವದ ಬದಲಾವಣೆಗಳನ್ನು ಮಾಡಿಕೊಳ್ಳಲಾಯಿತು. ಅಲ್ಲಿರುವ ಫರ್ನಿಚರ್‌ಗಳನ್ನೆಲ್ಲಾ ಸಾಗಿಸಿ ಸ್ಟೋರ್ ರೂಂನಲ್ಲಿ ಇರಿಸಲಾಯಿತು. ಲಿವಿಂಗ್ ಏರಿಯಾದ ಗೋಡೆಗಳ ಮೇಲೆ ಚಂದಚಂದದ ಚಿಟ್ಟೆಯ ಆಕೃತಿಯನ್ನು ವತ್ಸಲಾಳೇ ಮಾಡಿಟ್ಟಳು. ಅದಲ್ಲದೇ ಮೇಲೆ ಸೀಲಿಂಗ್‌ಗೆ ಹಾಕಲಾದ ಕೊಂಡಿಗೆ ಮೂರು ವಿಮ್ ಶೈಮ್ ತಂದು ತೂಗುಹಾಕಿದಳು. ಅದು ಇಡೀ ದಿನ ಝುಲ್ ಝುಲ್ ಅಂತ ಸದ್ದು ಮಾಡಿ ಇಡೀ ಮನೆಯನ್ನು ಸದ್ದಿನಿಂದ ತೊಳೆಯಿತು.

ಅಡುಗೆ ಮನೆಯ ಬಾಗಿಲು ಕೂಡ ತುಂಬ ಸಣ್ಣದಾಗಿ ತೋರುತ್ತಿತ್ತು, ಅದನ್ನು ಪ್ರವೇಶಿಸುವ ಜಾಗದ ಇಕ್ಕೆಲಗಳಲ್ಲಿ ವಸ್ತುಗಳೇ ತುಂಬಿದ್ದವು. ಅದನ್ನೂ ವತ್ಸಲಾ ತೆಗೆದು, ಬೇಡದ ವಸ್ತುವನ್ನು ಗೋಡೌನ್‌ಗೆ ತುಂಬಿ ಬೇಕಾಗಿದ್ದನ್ನು ಕಪಾಟಿನಲಿ ಜೋಡಿಸಿಟ್ಟಳು. ಬಾಲ್ಕನಿಯಲ್ಲಿ ನಿಂತು ಹರಟೆ ಹೊಡೆದು ಸುಸ್ತಾದರೆ ಕುಳಿತುಕೊಳ್ಳಲು ಇರಲಿ ಅಂತ ಎರಡು ಚೇರ್‌ಗಳನ್ನು ಹಾಕಿದಳು. ಒಂದಕ್ಕೆ ಆನೆ ಚಿತ್ರವಿರುವ ಮ್ಯಾಟ್ ಹಾಕಿದಳು. ಎದುರಿಗೊಂದು ಟೇಬಲ್, ಅದರ ಮೇಲೆ ಬಿದಿರಿನ ಸೊಪ್ಪುಹಾಕಿರುವ ಹೂದಾನಿ ಇಟ್ಟಳು. ಹೊರಗೆ ಹೋಗಿದ್ದ ಮೋಹನ್ ಮರಳುವಾಗ ಒಂದು ದೊಡ್ಡ ರತ್ನಗಂಬಳಿಯನ್ನು ತಂದಿದ್ದ. ಅದರ ತುಂಬ ಕೆಂಪು ಕಣಗೆಲೆ ಹೂವಿನ ದೊಡ್ಡ ದೊಡ್ಡ ಚಿತ್ತಾರಗಳಿದ್ದವು. ಬಿಡಿಸುತ್ತಲೇ ಉರುಳುರುಳಿಕೊಂಡು ಹೋಗಿ ಒಂದಷ್ಟು ಕೆಂಪು ಕಣಗೆಲೆಗಳು ಅವರ ಹಾಲ್ ತುಂಬ ಹರಡಿಕೊಂಡವು.

ಬರುವ ಅತಿಥಿಗೆ ಇಷ್ಟ ಅಂತ ಮೋಹನ್ ಹೇಳಿದ್ದಕ್ಕೆ ವತ್ಸಲಾ ಕರಿಗಡುಬು ಮಾಡಿಟ್ಟಳು. ಹೂರಣ ಯಾಕೆ ಇವತ್ತು ಇಷ್ಟೊಂದು ರುಚಿಯಾಗಿದೆ ಅಂತ ತಾನೇ ನಾಲ್ಕು ನಾಲ್ಕು ಸಲ ತಿಂದು ವತ್ಸಲಾ ಹತ್ತಿರ ಮೋಹನ್ ಬೈಸಿಕೊಂಡ. ಅತಿಥಿ ಬರುವ ಹಿಂದಿನ ರಾತ್ರಿ ಅವರಿಬ್ಬರೂ ಬೆಳದಿಂಗಳಿಲ್ಲದ ಕತ್ತಲ ಶಯ್ಯಾಗೃಹದಲ್ಲಿ ಸೇರಿದರು, ಇದೇ ಮೊದಲ ಸಲ ತಾವಿಬ್ಬರೂ ಸೇರುತ್ತಿದ್ದೇವೋ ಅನ್ನುವಂತೆ ಉನ್ಮಾದವೊಂದು ಇಬ್ಬರ ಮೈಯನ್ನೂ ಹೊಕ್ಕಿತು.

ಹೊರಗೆ ಕುಳಿತ ಶಾಕಿನಿ ರಾತ್ರೋರಾತ್ರಿ ನಾಚಿ ಹೊರಹೋಗಿದ್ದನ್ನು ಫೆಲ್ವಿನ್ನೋ ಎಂಬ ತಮ್ಮನೆಯ ಸಾಕು ನಾಯಿ ನೋಡಿತೋ ಎಂಬಂತೆ ಜೋರಾಗಿ ಅರಚಿಕೊಂಡಿತು.

***

ಬೆಳಿಗ್ಗೆ ಇಷ್ಟೊಂದು ತಡವಾಯಿತಲ್ಲಾ ಅಂತ ಮೋಹನ್ ದಡಬಡಿಸಿ ಎದ್ದ. ಪಕ್ಕದಲ್ಲಿ ವತ್ಸಲಾ ಇರಲಿಲ್ಲ, ಹೋಗಿ ಅಡುಗೆ ಮನೆಯಲ್ಲಿ ಹುಡುಕಿದರೂ ಕಾಣಲಿಲ್ಲ. ಮನೆಯನ್ನೆಲ್ಲಾ ಹುಡುಕಿ ಬಂದ. ಅಷ್ಟರಲ್ಲಿ ಜಗಲಿಯಿಂದ ಕೂಗಿಕೊಳ್ಳುತ್ತಾ ವತ್ಸಲಾ ಬರುವುದು ಕಾಣಿಸಿತು. ಇವತ್ತೇ ಮನೆಗೆ ಬರುವ ಅತಿಥಿಯನ್ನ ಕರೆದುಕೊಂಡು ಬರಬೇಕಾಗಿತ್ತು, ಅಲರಾಂ ಇಟ್ಟುಕೊಂಡರೂ ಬೆಳಿಗ್ಗೆ ಎಚ್ಚರಾಗಲಿಲ್ಲವಲ್ಲಾ ಅಂತ ಅವನು ತಡಬಡಾಯಿಸುತ್ತಾ ಕೂಗಿಕೊಳ್ಳುತ್ತಿರುವ ವತ್ಸಲಾ ಕಡೆಗೆ ಮೋಹನ್ ಆತಂಕದಿಂದ ನೋಡಿದ.

ಅವಳು ಏದುಸಿರು ಬಿಡುತ್ತಾ ಬಂದು ಹೇಳಿದಳು ಅಯ್ಯೋ ನೀವೇನು ಇಷ್ಟೊತ್ತು ಮಾಡಿದ್ರಿ, ನಿಮ್ಮ ಗೆಸ್ಟ್ ಬಂದಾಯ್ತು..

ಅವನಿಗೆ ಅಚ್ಚರಿಯಾಯಿತು, ಇಷ್ಟು ಬೇಗ, ಅದೂ ತಾನು ಕರೆದುಕೊಂಡು ಬರದೇ.. ಅದು ಹೇಗೆ? ಛೇ ನಿಂಗೆ ಸರ್ಪ್ರೈಸ್‌ಕೊಡೋಣ ಅಂತಿದ್ನಲ್ಲೇ, ನೋಡ್ಬಿಟ್ಯಾ?

ನಿರಾಶೆ ಮತ್ತು ಗಡಿಬಿಡಿಯಲ್ಲಿ ಅವನು ಉಟ್ಟ ಲುಂಗಿಯನ್ನು ಕೆಳಗೆ ಬಿಟ್ಟು, ತಲೆ ಬಾಚಿಕೊಳ್ಳುತ್ತಾ ಅವಳನ್ನು ಹಿಡಿದುಕೊಂಡು ಬಿರಬಿರನೆ ಬಾಗಿಲ ಬಳಿ ಓಡಿದ. ಬಾಗಿಲು ತೆರೆದೇ ಇತ್ತು. ವತ್ಸಲಾಗೆ ಯಾಕೋ ತಲೆ ಸುತ್ತಿದಂತಾಯಿತು, ಬವಳಿ ಬಂದಂತಾಗಿ ಮೋಹನ್‌ನನ್ನು ಹಿಡಿದುಕೊಂಡಳು.

ಅವನೆಂದ ನಿಧಾನ, ಏನಾಯ್ತು?

ಅವಳು ಬಾಗಿಲ ಕಡೆ ನೋಡಿದಳು, ಅತಿಥಿ ನಿಂತಿದ್ದ ಅಗಾಧವಾಗಿ. ಕಿವಿ ನಿಜಕ್ಕೂ ಅವರಿಬ್ಬರ ಮಾತಷ್ಟೇ ಅಲ್ಲ, ಇಡೀ ಮನೆಯ ಮೌನವನ್ನು ಆಲಿಸುವಷ್ಟು ದೊಡ್ಡದಾಗಿತ್ತು. ತನ್ನ ದುಃಖವನ್ನು ಅನಾಮತ್ತಾಗಿ ಎತ್ತಿ ತನ್ನ ಬೆನ್ನ ಮೇಲೆ ಕುಳ್ಳಿರಿಸಿಕೊಳ್ಳುವಷ್ಟು ಬೆನ್ನೂ ಬಲವಾಗಿತ್ತು. ಎಲ್ಲವನ್ನೂ ಸೂಕ್ಷ್ಮವಾಗಿ ಗ್ರಹಿಸಿಬಿಡುವಷ್ಟು ಕಣ್ಣು ತೀಕ್ಷ್ಣವೂ, ತೀರಾ ಚಿಕ್ಕದೂ ಆಗಿತ್ತು. ಆ ಪಾದ ಈ ರತ್ನಗಂಬಳಿಯ ಮೇಲೆ ಇರಿಸುತ್ತಲೇ ತಮ್ಮ ಮನೆಯ ಸಂಭ್ರಮಗಳೆಲ್ಲಾ ಗರಿಕೆಯಂತೆ ಚಿಗುರುವುದು ಖಾತ್ರಿಯೆನ್ನುವಂತೆ ಅತಿಥಿ ಕಾಲೆತ್ತಿ ನಿಂತಿದ್ದರು ಬಾಗಿಲೆದುರು. ಹೊರಗೆ ನಿಂತ ಕಂದು ಬಣ್ಣದ, ಭಾರೀ ಗಾತ್ರದ, ಕಿರುಗಂಟೆಯ ಕಾಲ್ ಸರಪಳಿಯ ಅತಿಥಿ ಇನ್ನೇನು ಆ ಮನೆಯ ಒಳಗಡಿ ಇಡಲಿತ್ತು. ಆದರೆ ಪ್ರಧಾನ ಬಾಗಿಲ ರೂಪದಲ್ಲಿ ಬಾಯ್ತೆರೆದು ನಿಂತ ರಾಕ್ಷಸನ ಕೋರೆದಾಡೆಗಳನ್ನು ನೋಡುತ್ತಲೇ ಅತಿಥಿಯ ಕಣ್ಣುಗಳು ಭಯಗೊಂಡು, ಕಾಲ್ಗಳು ಅದುರಿ ಏನು ಮಾಡಬೇಕೆಂದು ತೋಚದೇ ಆತ ಅಲ್ಲೇ ನಿಂತ.

ಇವರು ಹೊರಹೋಗಲಿಕ್ಕಾಗದಂತೆ ಬಾಗಿಲಲ್ಲಿ ಅತಿಥಿ ಅಡ್ಡಲಾಗಿ ನಿಂತಿದ್ದ, ಅತಿಥಿ ಒಳಗೆ ಬಾರದ ಹಾಗೆ ರಾಕ್ಷಸ ಹೊರಗೆ ಕಾವಲಿದ್ದ.

ರತ್ನಗಂಬಳಿಯ ಕೆಂಪು ಕಣಗೆಲೆ ಹೂವು ಹಾಲ್‌ನಲ್ಲಿ ಹಾಗೇ ಬಾಡುತ್ತಿತ್ತು. ■